Doc-584
T-P-2

(1)

Regd no KKNN 12 — For Influential Publicity — 22-9-16

ಸ್ವರ್ಣಮಹೋತ್ಸವ ನೆರವೇರಿಸಿ ವಜ್ರಮಹೋತ್ಸವ ನೋಡಲಿರುವ ದಿನಪತ್ರಿಕೆ

ಸತ್ಯವಾದಿ

SATYAVADI

60th Diamond Jubilee Year
60 ನೇ ವಜ್ರಮಹೋತ್ಸವ ವರ್ಷ

★ Satyavadi Daily . Mysore 4 ★

ಸಂಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ — ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ — [5 ಪೈಸೆ

ದಸರಾ ವಸ್ತುಪ್ರದರ್ಶನ ಮುಂದಕ್ಕೆ

ಮೈಸೂರು — ಈ ದಿನ ಕರೆಯಿದ್ದ ಶಕ್ತಿಕ್ಷಾ ಸಂಮೇಳನದಲ್ಲಿ ಮೈಸೂರು ದಸರಾ ವಸ್ತುಪ್ರದರ್ಶನದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಗಳಾದ ಡಿ ಜಯದೇವ ರಾಜ ಅರಸ್ ಮತ್ತು ಬಿ ಸಿ ಲಿಂಗಯ್ಯ ಅವರು ಮಾತನಾಡುತ್ತಾ, ಅನಿವಾರ್ಯ ಕಾರಣ ಈ ತಿಂಗಳು 24 ರಿಂದ ಆರಂಭವಾಗಬೇಕಾಗಿದ್ದ ದಸರಾ ವಸ್ತುಪ್ರದರ್ಶನ 29 ರಿಂದ ಆರಂಭವಾಗುವದು ಎಂದರು.

29 ನೇ ತಾ ಬೆಳಿಗ್ಗೆ 10-30 ಗಂಟೆಗೆ ವಸ್ತುಪ್ರದರ್ಶನ ಉದ್ಘಾಟನೆಯನ್ನು ಕೇಂದ್ರ ಪ್ರವಾಸೋದ್ಯಮ ಮಂತ್ರಿ ಶ್ರೀ ರಾಜಬಹದ್ದೂರ್‌ರವರು ನೆರವೇರಿಸುವುದಾಗಿ ತಿಳಿಸಿದರು. ಅಧ್ಯಕ್ಷತೆಯನ್ನು ರಾಜ್ಯದ ಪಶುಸಂಗೋಪನಾ ಮಂತ್ರಿ ಶ್ರೀ ಮಹಮದ್ ಹಾಲಿಯವರು ವಹಿಸುವರು.

29 ರಿಂದ ಆರಂಭವಾಗುವ ದಸರಾ ಕ್ರೀಡೆಗಳ ಉದ್ಘಾಟನೆಯನ್ನು ಮಂತ್ರಿ ಶ್ರೀ ಆರ್. ಗುಂಡೂರಾವ್‌ರವರು ನೆರವೇರಿಸುವರು. ದಸರಾ ಮಹೋತ್ಸವದ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳ ಆರಂಭೋತ್ಸವವನ್ನು ಶ್ರೀ ಎಫ್. ಕೆ ಇರಾನಿಯವರ ಅಧ್ಯಕ್ಷತೆಯಲ್ಲಿ ಮಂತ್ರಿ ಶ್ರೀ ಹೆಜ್ ಎಂ ಚನ್ನಬಸಪ್ಪನವರು ನೆರವೇರಿಸುವರು.

ಮೊದಲ ಹೆಜ್ಜೆ

ಮಾನವೀಯತೆ ಮಾಯವಾಗುತ್ತ ನ್ಯಾಯೀಯತೆ ಹೆಚ್ಚಾಗುತ್ತಿದೆನ್ನುವದಕ್ಕಿಂತ ಇಂದಿನ ಮಾತು ; ಪಾಪದವರು ಬದುಕುವ ಹಾಗಿಲ್ಲ ;.... ಇಂತಹ ಮಾತುಗಳನ್ನು ದಿನಗಳಿಗೆ ಹೇಳಿಸುವುದು ಒಂದು ಅಭ್ಯಾಸ

ಸಾಮಾನ್ಯವಾಗಿ ಹೆಚ್ಚಿನ ಪ್ರಾಣಿಗಳ ಮೇಲೆ ಮಾನವ ಪ್ರಾಬಲ್ಯವನ್ನು ತೋರಿಸುತ್ತಿದ್ದಾನೆನ್ನಲಾಗುತ್ತಿದೆ. ಇದನ್ನು ತಡೆಗಟ್ಟಲು ತಮಿಳ್ನಾಡಿನ ಪೋಲೀಸ್ ಅಧಿಕಾರಿಗಳು ಯೋಚಿಸಿದ್ದಾರೆ. ಸಿಕ್ಕಾಬಟ್ಟೆ ನಡೆಸಲಾಗುತ್ತಿರುವ ಪ್ರಾಣಿಗಳ ಕೊಲೆ ಮತ್ತು ಕ್ರೂರತೆಯನ್ನು ತಡೆಗಟ್ಟಲು ಪೋಲೀಸ್ ಪಡೆಯನ್ನು ಉಪಯೋಗಿಗಿಸುವುದಕ್ಕೆ ಅವರ ಕಾರ್ಯರಂಗವನ್ನು ವಿಸ್ತರಿಸಲಾಗುವುದೆಂದು ಅಧಿಕಾರಿಗಳು ತಿಳಿಯಪಡಿಸಿದ್ದಾರೆ.

ಇದರ ವ್ಯಾಪ್ತಿ ವಿಶಾಲ : ಅದಕ್ಕೊಂದು ಇತಿಮಿತಿ ಇಲ್ಲದಿರಬಹುದು ; ಪಥ್ಯಕ್ಕೆ ತೀವ್ರ ಅವಶ್ಯಕತೆ ಇರುವುದಕ್ಕೆ ಅವರ ಗಮನ ಹರಿಯುವುದು ಅತ್ಯವಶ್ಯಕ. ಎಲ್ಲಾ ಪ್ರಾಣಿಗಳು ಅನ್ನುವುದರ ಬದಲು, ಪಥ್ಯಕ್ಕೆ ಹಾಗೂ ಮುಂದಕ್ಕೆ ಗೋವಿನ ಕೊಲೆಯನ್ನು ತಪ್ಪಿಸಲು, ಅದರ ಸಂರಕ್ಷಣೆಯುಕ್ತ ನಗರ ರಕ್ಷಣಾಪಡೆಗಮನ ಕರುಹಿದರೆ ಸಾಕು ; ಒಂದು ಚಕ್ರ ತಿರುಗಿದರೆ ಸಾಕು, ಇತರ ಚಕ್ರಗಳು ತಾವಾಗಿಯೇ ತಿರುಗಲಾರಂಭಿಸುತ್ತವೆ ; ಪೋಲೀಸರ ಗಮನ, ಹಾಗೇನೇ ಜನತೆಯ ಗಮನ ಅತ್ತ ಪರಿದಾಗ ಅವರು ಯುಕ್ತಿಯುಕ್ತವೆನ್ನು ತಿಳಿದೆಲ್ಲ ಪ್ರಾಣಿಗಳಿಗೆ ಹಿಂಸೆ ಕೊಡುವುದನ್ನು ತವಗಿಯೇ ನಿಲ್ಲಿಸುತ್ತಾರೆ

— ಶಿವಶಂಕರ

★

ನಿಮಗೆ ತಿಳಿದಿದೆಯೇ ? — ಬ್ರಿಟನ್‌ನಿನ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ ರವರು ಒಂದೂದರೂ ಲಾಬಿ ಸಭೆಯನ್ನಾಗಲೀ, ಪತ್ರಿಕಾ ಗೋಷ್ಠಿಯನ್ನಾಗಲೀ ನಡೆಸಲಿಲ್ಲವಂತೆ !

ಸ್ಕೂಟರು ಉತ್ಪಾದನೆ

ಬೆಂಗಳೂರು — ಮದ್ದೂರಿನಲ್ಲಿ ಸ್ಥಾಪಿತವಾಗಿರುವ ರೂ 425 ಲಕ್ಷದ ಸ್ಕೂಟರು ಕಾರ್ಖಾನೆ ಉತ್ಪಾದನೆ ಮಾಡಲು ಆರಂಭಿಸಿದೆ. ಕೇಂದ್ರದ ಕೈಗಾರಿಕೆ ಮಂತ್ರಿಯವರಾದ ಶ್ರೀ ಟಿ ಎ ಪೈರವರು ಉದ್ಘಾಟಿಸಿ ಮುಖ್ಯ ಮಂತ್ರಿ ಶ್ರೀ ಡಿ ದೇವರಾಜ ಅರಸುರವರು ಮೊದಲನೆಯ ತಂಡದ 10 ಸ್ಕೂಟರುಗಳನ್ನು ಅಕ್ಟೋಬರು 10 ರಂದು ಬಿಡುಗಡೆ ಮಾಡುವರು.

— ೦ —

ಶ್ರೀ ಗಣಪತಿ ಸಚ್ಚಿದಾನಂದಾಶ್ರಮ

ಮೈಸೂರಿನಲ್ಲಿರುವ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನವರಾತ್ರಿ ಪೂಜೆಗಳು ಈ ತಿಂಗಳು 24 ರಿಂದ ಆರಂಭವಾಗುವವು

ಈ ತಿಂಗಳು 28 ರಿಂದ ಮುಂದಿನ ತಿಂಗಳು 7 ರ ವರೆಗೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಯವರು ನವರಾತ್ರಿ ಪೂಜೆ ನಡೆಸುವರು ಮುಂದಿನ ತಿಂಗಳು 8 ರಂದು ಶಾಂತಿ ಹೋಮ ನಡೆಸುವರು

26 ರ ಬೆಳಿಗ್ಗೆ 11 ಗಂಟೆಗೆ ವಿದೇಶ ಪ್ರವಾಸದಿಂದ ವಾಪಸಾದ ಸಂದರ್ಭದಲ್ಲಿ ಸಚ್ಚಿದಾನಂದ ಸ್ವಾಮಿಯವರನ್ನು ನಾಗರಿಕರ ಪರವಾಗಿ ಸ್ವಾಗತಿಸಲಾಗುವುದು. ಜಗನ್ಮೋಹನ ಅರಮನೆಯಲ್ಲಿ ನಡೆಯುವ ಈ ಸಮಾರಂಭಕ್ಕೆ ಕೃಷಿ ಮಂತ್ರಿ ಹುಚ್ಚೆಮಾಸ್ತಿಗೌಡರವರು ಮುಖ್ಯ ಅತಿಥಿಗಳಾಗಿರುವರು.

ಮುಖ್ಯ ಮಂತ್ರಿಗಳ ಎಚ್ಚರಿಕೆ

ಪಾವಗಡ — ಪಾಲಮಂಜೂರಾತಿಯಲ್ಲಿ ಬಡವರ ವಿಚಾರದಲ್ಲಿ ರಾಷ್ಟ್ರೀಕರಣ ಭ್ರಾಂತುಗಳ ಮನೋಭಾವ ಬದಲಾವಣೆ ಆಗದಿದ್ದರೆ ಸರ್ಕಾರ ಮಧ್ಯಸ್ಥಿಕೆ ಬರುವ ದೆಂದು ಭಾರಿ ಸಾರ್ವಜನಿಕ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಡಿ ದೇವರಾಜ ಅರಸರವರು ತಿಳಿಸಿದರು.

ಒಂದು ಪವಾರಂಭದಲ್ಲಿ ಅವರು ವಿವರಿಸುತ್ತಾ, ತಮ್ಮನ್ನು ಅಧಿಕಾರದಿಂದ ಹೊರದೂಡಲು ಅತ್ಯಲ್ಪ ಪಾರ್ಟಿ ಜನರೂ ಹಾಗೂ ಸರ್ಕಾರದ ಪ್ರಗತಿ ವಿರೋಧಿಗಳು ಪ್ರಯತ್ನಿಸುತ್ತಿರುವರೆಂದು, ಇದರ ಕುರಿತು ಜನತೆ ವಿಶ್ವಾಸ ಹೊಂದಿರುವದರಿಂದ ಇದು ಸಾಧ್ಯವಾಗಿಲ್ಲವೆಂದು ತಿಳಿಸಿದರು.

ಭಾರತಕ್ಕೆ ಸಿಗುವ ಭರವಸೆ

ನವ ದೆಹಲಿ — ಈ ವರ್ಷದ ಕಡೆಯಲ್ಲಿ ಜಪಾನ್ ಪಾಲಿ ಮಾಡುವ ರಕ್ಷಣಾ ಸಮಿತಿಯಲ್ಲಿನ ಸ್ಥಾನವು ಭಾರತಕ್ಕೆ ದೊರೆಯುವ ಭರವಸೆ ದೊರೆತಿದೆ.

★

ನವ ದೆಹಲಿ — 3000 ಸ್ವಾತಂತ್ರ ಹೋರಾಟಗಾರರ ವಿಶೇಷ ಪಿಂಚಣಿ ಬಗ್ಗೆ ದೂರು ಹೋಗಿ ಸರ್ವೆ ಮಾಡಲಾಗಿದೆ 169 ಸಂದರ್ಭಗಳಲ್ಲಿ ನಿಲ್ಲಿಸಲಾಗಿದೆ 4 ಸಾವಿರ ಸಂದರ್ಭದಲ್ಲಿ ವಿಮರ್ಶೆ ಇದೆ

Large Range of Daily Wear

Nylex, Cotton, Voile, etc Sarees
in up-to-date Designs

Please Visit :

Bank Road Bahusar

(2)

ಟೇಬಲ್ ಟೆನ್ನಿಸ್ ಪಂದ್ಯ

ಮೈಸೂರು — ಮುಂದಿನ ತಿಂಗಳು 7 ರಿಂದ 10 ರ ವರೆಗಿನ ದಿನಗಳಲ್ಲಿ ನಡೆಯುವ ದಕ್ಷಿಣ ಭಾರತ ಟೇಬಲ್ ಟೆನ್ನಿಸ್ ಸಂಥದಲ್ಲಿ 150 ಕ್ಕೆ ಹೆಚ್ಚು ಆಟಗಾರರು ಭಾಗವಹಿಸುವರು.

ಂ

ಫಲಪುಷ್ಪ ಪ್ರದರ್ಶನ

ಮೈಸೂರು — ವಾರ್ಷಿಕ ಫಲಪುಷ್ಪ ಪ್ರದರ್ಶನ ಈ ತಿಂಗಳು 24 ರಿಂದ ಮುಂದಿನ ತಿಂಗಳು 2 ರ ವರೆಗೆ ನಡೆಯುವುದು ಎಂದು ಹಾರ್ಟಿಕಲ್ಚರಲ್ ಇಲಾಖೆ ಅಧಿಕಾರಿ ಜವರೆಗೌಡರು ತಿಳಿಸಿದರು ಕಳೆದ ಒಂದು ವರ್ಷದಿಂದ ಶಾಲೆಕಾಲೇಜುಗಳಿಗೆ 16 ಸಾವಿರ ಸಸಿಗಳನ್ನು ಕೊಡಲಾಗಿದೆ ಎಂದರು ಜನವರಿಯಿಂದ 6 ತಿಂಗಳ ತೋಟಗಾರಿಕೆ ಶಿಕ್ಷಣ ನಡೆಸಲಾಗುವುದೆಂದು ತಿಳಿಸಿದರು.

ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥನು ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ.

ಗೋರಕ್ಷಣೆ'ಕ್ಕೆ ನಿಮ್ಮ ಕಿರು ನೆರವು ನೀಡಿ

ಗೋರಕ್ಷಣೆ ಪ್ರಾಣಿದಯಾ ಮುಂತಾದ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿರುವಾಗ, "ಗೋರಕ್ಷಣೆ"ಯು ತನ್ನ ಬೆಳ್ಳಿ ಹಬ್ಬ ನೆರವೇಗಿರುವದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ, ಗೋಮಾತೆ ಭಕ್ತರೂ, ಪ್ರಾಣಿದಯಾಪರರೂ ಜಾತಿ, ಮತ, ಭಾಷೆ ಬೇಧಭಾವವಿಲ್ಲದೆ, 'ಗೋರಕ್ಷಣೆ"ಯ ಅಭಿವೃದ್ಧಿ ಸಂದೇಶ ಮತ್ತು ಧನ ನೆರವನ್ನು ನೀಡಬೇಕೆಂದು ವಿನಂತಿಸುತ್ತೇವೆ

'ಗೋರಕ್ಷಣೆ' ಬೆಳ್ಳಿ ಹಬ್ಬ ಮತ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕ, ಗೋರಕ್ಷಣೆ ಪತ್ರಿಕೆ, ಚಾಮರಾಜಪುರಂ, ಮೈಸೂರು 4

Protect the Cow

Contribute Liberally to the National Defence Fund

ವುಡ್‌ಲಾಂಡ್ಸ್ 24 9 76 ರಿಂದ

ಅವೋಘ ಆರಂಭ

ರಂಗೀಲಾ ರತನ್

ಹಿಂದಿ

ಕಲರ್

ರಿಷಿಕಪೂರ್ ಸರ್ವಿಬಾಬಿ ಅಶೋಕಕುಮಾರ್ ಅಜಿತ್ ಅಭಿನಯ

ದಿನ 3 ಪ್ರದರ್ಶನಗಳು

ಅಪೆರಾ 17 9 76 ರಿಂದ

ವಿಜಯವಾಣಿ

ಶ್ರೀನಾಥ್ ಕಲ್ಪನ ದ್ವಾರಕೀಶ್ ರಾಜಾಶಂಕರ್ ಅಭಿನಯ

ಕನ್ನಡ ಶಂಗೀ ವಿನಾಯಿತಿ ಪ್ರತಿ ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Edited Printed and Published by Dharmaprachararatna M S. Krishna Rao (Proprietor) at the Satyavadi Press, Chamarajapuram Mysore 4